# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕಂಪನಿಯ ನೋಂದಾಯಿತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.
ನಿಗಮದ ಐಡೆಂಟಿಟಿ ಸಂಖ್ಯೆ(ಸಿ.ಐ.ಎನ್): U40109KA1999SGC025521, ವೆಬ್‌ಸೈಟ್: www.kptcl.com

ಇ-ಅಂಚೆ:eeesrshtgly@gmail.com
ದೂರವಾಣಿ: 0821-2404889

ಕಾರ್ಯನಿರ್ವಾಹಕ ಇಂಜಿನಿಯರ್(ವಿದ್ಯುತ್)ರವರ ಕಛೇರಿ,
ಟಿ.ಎಲ್&ಎಸ್‌ಎಸ್ ಹೂಟಗಳ್ಳಿ ವಿಭಾಗ,
ಎಸ್ ಆವರಣ, ಎನ್.ಆರ್.ಮೊಹಲ್ಲಾ,ಮೈಸೂರು.

ಕ್ರಮ ಸಂಖ್ಯೆ: ಕಾನಿಇಂ(ವಿ)/ಹೂಟಗಳ್ಳಿ/ಸಇಂತಾ-1/ಕ-137/2019-20/3870-73 ದಿನಾಂಕ:

26 JUN 2019

ಗೆ,

ವಲಯ ಅರಣ್ಯಾಧಿಕಾರಿ,
ಮಡಿಕೇರಿ ವಲಯ,
ಮಡಿಕೇರಿ.

ಮಾನ್ಯರೆ,

ವಿಷಯ:- Renewal of lease period of 1.00 H.A forest land of Karnangeri reserve forest Sy No.236/1 karnangeri village already established 66/11 kV S/s in favour of Executive Engineer(Ele), KPTCL, TL&SS Hootagally Division, N.R.Mohalla, FTS Compound, Mysuru-570 007 -ಅನುಪಾಲನ ವರದಿ ಬಗ್ಗೆ.

ಉಲ್ಲೇಖ:-1) ತಮ್ಮ ಕಛೇರಿ ಪತ್ರ ಸಂಖ್ಯೆ ವಅಅ/ಮಡಿಕೇರಿ/66 ಕೆ.ವಿ/ಸಿ ಆರ್/31/2019-20/187 ದಿನಾಂಕ 19-06-2019.

ವಿಷಯಕ್ಕೆ ಸಂಬಂಧಿಸಿದಂತೆ, ಕರ್ಣಂಗೇರಿ ಮೀಸಲು ಅರಣ್ಯ ಪ್ರದೇಶದ ಸರ್ವೇ ನಂ 236/1 ರಲ್ಲಿ 1 ಹೆಕ್ಟೇರ್ ಜಾಗದಲ್ಲಿ ಈಗಾಗಲೇ ನಿರ್ಮಾಣವಾಗಿರುವ 66/11 ಕೆ.ವಿ ವಿ.ವಿ ಕೇಂದ್ರದ ಲೀಸ್ ಅವಧಿಯ ನವೀಕರಣದ ಸಂಬಂಧ ಈ ಕೆಳಕಂಡಂತೆ ಅನುಪಾಲನ ವರದಿಯನ್ನು ಸಲ್ಲಿಸಲಾಗಿದೆ.

1. ವಿ.ವಿ.ಕೇಂದ್ರವನ್ನು ನಿರ್ಮಿಸಿರುವ ಜಾಗದ ಪ್ರಸ್ತುತ ಸ್ಥಿತಿಯು ಮೀಸಲು ಅರಣ್ಯ ಪ್ರದೇಶವಾಗಿಯೇ ಉಳಿದಿರುತ್ತದೆ ಮತ್ತು ಮುಂದುವರೆಯುತ್ತದೆ.
2. **ವಿ.ವಿ.ಕೇಂದ್ರವು ಲೀಸ್ ಅವಧಿಯ ಅರಂಭದಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳ ಅನುಸಾರವಾಗಿಯೇ ನಿರ್ಮಾಣವಾಗಿರುತ್ತದೆ ಮತ್ತು ಮುಂದುವರೆಯುತ್ತದೆ.**
3. ಯಾವ ಉದ್ದೇಶಕ್ಕಾಗಿ ಸದರಿ ಜಾಗವನ್ನು ಪಡೆಯಲಾಗಿದೆಯೋ, ಆ ಉದ್ದೇಶಕ್ಕಾಗಿಯೇ ಉಪಯೋಗಿಸಲ್ಪಡುತ್ತಿರುತ್ತದೆ.
4. ಲೀಸ್ ಅವಧಿ ನವೀಕರಣವು ಸರ್ಕಾರದಿಂದ ನೀಡುವ ಅವಧಿಗೆ ಪಡೆಯಲು ಮತ್ತು ತತ್ಸಂಬಂಧ ನೀಡುವ ಲೀಸ್ ಮೊತ್ತವನ್ನು ಪಾವತಿಸಲು ಒಪ್ಪಿಗೆ ಇರುತ್ತದೆ.
5. ವಿ.ವಿ.ಕೇಂದ್ರವು ಹಾಲಿ 1 ಹೆಕ್ಟರ್‌ಗಿಂತ ಹೆಚ್ಚು ಜಾಗವನ್ನು ಬಳಸಿಕೊಂಡಿರುವುದಿಲ್ಲಾ.
6. ಸದರಿ ಜಾಗವನ್ನು ಬೇರೆ ಯಾವುದೆ ಉದ್ದೇಶಕ್ಕಾಗಲಿ ಅಥವಾ ವ್ಯಕ್ತಿಗಾಗಲಿ ಪರಭಾರೆ ಮಾಡಿರುವುದಿಲ್ಲಾ.
7. ಸದರಿ ಜಾಗದಲ್ಲಿ, ಜಾಗವು ಶಾಶ್ವತವಾಗಿ ಹಾನಿಕಾರವಾಗುವ ಯಾವುದೇ ಕ್ರಿಯೆಗಳನ್ನು ಮಾಡಿರುವುದಿಲ್ಲಾ ಹಾಗೂ ಮಾಡುವುದಿಲ್ಲಾ.
8. ಸರ್ಕಾರದಿಂದ ಕಾಲ ಕಾಲಕ್ಕೆ ನಿಗದಿಪಡಿಸುವ ಅಥವಾ ಜಾರಿ ಮಾಡುವ ನಿಯಮ ಮತ್ತು ಕಾಯ್ದೆಗಳಿಗೆ ಬದ್ಧವಾಗಿರುತ್ತೇವೆ ಎಂದು ಈ ಮೂಲಕ ತಮ್ಮ ಗಮನಕ್ಕೆ ತಕಿಳಿಯಸುತ್ತೇನೆ.

ತಮ್ಮ ವಿಶ್ವಾಸಿ,

26/6/19

ಕಾರ್ಯನಿರ್ವಾಹಕ ಇಂಜಿನಿಯರ್(ವಿ),

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
# ವಲಯ ಅರಣ್ಯಾಧಿಕಾರಿಯವರ ಕಚೇರಿ, ಮಡಿಕೇರಿ ವಲಯ, ಮಡಿಕೇರಿ

Phone No : 08272- 298161 Email ID : rfomadikeri@gmail.com

ಸಂಖ್ಯೆ:ವಅಅ/ಮಡಿಕೇರಿ/66 ಕೆ.ವಿ/ಸಿಆರ್/31/2019-20 | 187 ದಿನಾಂಕ:19-06-2019

ಇವರಿಗೆ,

ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಟಿ.ಎಲ್& ಎಸ್.ಎಸ್. ವಿಭಾಗ ಹೂಟಗಳ್ಳಿ
ಎನ್.ಆರ್.ಮೊಹಲ್ಲಾ, FTS Compound
ಕ.ವಿ.ಪ್ರ.ನಿ.ನಿ, ಮೈಸೂರು-04

ವಿಷಯ : Release of 1.00 ha forest land in Sy.No.236/1 of Karnangeri village of Kodagu District for construction of KEB Sub station in favour of the executive engineer O & M Division KEB Madikeri - reg.

ಉಲ್ಲೇಖ : ಮಾನ್ಯ ಉಪ ಅರಣ್ಯಸಂರಕ್ಷಣಾಧಿಕಾರಿಗಳು ಮಡಿಕೇರಿ ವಿಭಾಗ ಮಡಿಕೇರಿ ಇವರ ಪತ್ರ ಸಂಖ್ಯೆ ಭೂಮಿ/ಎಫ್‌ಸಿಎ/ಕರ್ಣಂಗೇರಿ/ಸಿಆರ್-53/98-99. ದಿನಾಂಕ:02-04-2019

201
2331
20 JUN 2019
20/6/2019

********************

ಮಡಿಕೇರಿ ತಾಲ್ಲೂಕು ಕರ್ಣಂಗೇರಿ ಗ್ರಾಮದ ಸರ್ವೆ ನಂ.236/1 ರಲ್ಲಿ 1.00 ಹೆಕ್ಟೇರ್ ಅರಣ್ಯ ಭೂಮಿಯನ್ನು 66 ಕೆ.ವಿ ವಿದ್ಯುತ್ ಉಪಕೇಂದ್ರದ ಸ್ಥಾಪನೆಗಾಗಿ ನಿಡಿರುವ ಭೂಮಿಯ ಗುತ್ತಿಗೆಯ ಅವಧಿಯನ್ನು ನವೀಕರಿಸುವ ಸಂಭಂದ ಟೋಪೋಶೀಟಿಗೆ ಕ್ರಮ ಸಂಖ್ಯೆ ದಾಖಲಿಸಿ ವಿದ್ಯುತ್ ಉಪಕೇಂದ್ರದ ಕೇಂದ್ರ ನೀರ್ಮಾಣಕ್ಕೆ ರಾಜ್ಯ ಸರ್ಕಾರದಿಂದ ಹತ್ತು ವರ್ಷದ ಅವಧಿಗೆ ಗುತ್ತಿಗೆ ನೀಡುವ ಸಂಧರ್ಭ ವಿಧಿಸಿರುವ ಷರತ್ತುಗಳಿಗೆ ಉಪಯೋಗಿ ಸಂಸ್ಥೆಯವರಿಂದ ಅನುಪಾಲನಾ ವರದಿ ಪಡೆದು ಸಲ್ಲಿಸಲು ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮಡಿಕೇರಿ ವಿಭಾಗ ಮಡಿಕೇರಿ ಇವರು ಉಲ್ಲೇಖಿತ ಪತ್ರದಲ್ಲಿ ಸೂಚಿಸಿರುತ್ತಾರೆ. ಆದ್ದರಿಂದ ತಾವು ಅನುಪಾಲನಾ ವರದಿಯನ್ನು ಕೂಡಲೆ ಈ ಕಛೇರಿಗೆ ಕಳುಹಿಸಿ ಕೊಡಲು ಕೋರುತ್ತೇನೆ.

ಗೌರವಗಳೊಂದಿಗೆ,

ತಮ್ಮ ನಂಬುಗೆಯ,

ವಲಯ ಅರಣ್ಯಾಧಿಕಾರಿ,
ಮಡಿಕೇರಿ ವಲಯ, ಮಡಿಕೇರಿ

ಪ್ರತಿಯನ್ನು ಗೌರವಗಳೊಂದಿಗೆ ಮಾನ್ಯ ಉಪ ಅರಣ್ಯ ಸಂರಕ್ಷಣಾದಿಕಾರಗಳು, ಮಡಿಕೇರಿ ವಿಭಾಗ, ಮಡಿಕೇರಿ ಇವರ ಅವಗಾಹನೆಗಾಗಿ ಸಲ್ಲಿಸಿದೆ.